ಮೆ॥ ಅಬ್ದುಲ್‌ಖಾದರ್ ಯವರು ರಜಾವ ಮೇಲೆ ಇರುವ ಕಾಲದಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ವರಿಗೆ, ಫೈರ್‌ಟ್ರಾಕ್ಸ್ ಸಬ್ ಡಿವೀರ್ಜ್ ಜಾರ್ಜಿನಲ್ಲಿ ಇರುವ ಅ॥ ಕಮ್ಮಿಷನರ್ ಮೆ॥ ವಿ. ಪಿ. ಮಾಧವರಾವ್ ಬಿ. ಎ. ಯವರು, ತಮ್ಮ ಸ್ವಂತ ಕೆಲಸಗಳಲ್ಲದೆ ಮೈಸೂರು ಡಿಸ್ಟ್ರಿಕ್ಟ್ ಜೆ॥ ಕಮ್ಮಿಷನರ್ ವ ಡಿಸ್ಟ್ರಿಕ್ಟ್ ಮೂಜಿಸ್ಟ್ರೇಟರಾಗಿ ಸಹ ಕೆಲಸನೋಡುವಂತೆ ವೊಕರರ್ ಮಾಡಲ್ಪಟ್ಟಿರುತ್ತಾರೆ.

ಕ್ಯಾಂಪ್ ನಂ. 313.—ಅರಕಲ್‌ಗೂಡು ಡೆಪ್ಯೂಟಿ ಅಮಲ್‌ದಾರ್ ತಿರುವೆಂಗಡಸಾಮಿ ಪೊವಲಿದಾರ್‌ಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 2 ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಿರುವೆಂಗಡಸಾಮಿ ಪೊವಲಿಯೂರು ರಜಾದ ಮೇಲೆ ಇರುವಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ವರಿಗೆ, ಹೊಳೆನರಸಿಪುರ ತಾಲ್ಲೂಕು ಅಮಲ್‌ದಾರ್ರು ಅರಕಲ್‌ಗೂಡ್ ರೆಂಜಿನ ಚಾರ್ಜನ್ನು ವಹಿಸತಕ್ಕದ್ದು.

ತಾರೀಖು 3ನೇ ಜೂನ್ 1885.

ಕ್ಯಾಂಪ್ ನಂ. 343.—ತೀರ್ಥಹಳ್ಳಿ ತಾಲ್ಲೂಕು ಅಮಲ್‌ದಾರ್ ತಿರುಮಲಾಚಾರ್ಯಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 15 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 345.—ಗುಡಿಬಂಡೆ ಡೆಪ್ಯೂಟಿ ಅಮಲ್‌ದಾರ್ ಸೀತಾರಾಮಯ್ಯನವರಿಗೆ, ಬರುವ ತಿಂಗಳು 16ನೇ ತಾರೀಖು ಲಾಗಾಯತು ವಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಸೀತಾರಾಮಯ್ಯನವರ ಗೈರ್‌ಹಾಜರೀಯಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ವರಿಗೆ, ಗೋರೀಬಿದನೂರು ತಾಲ್ಲೂಕು ಪೊಲೀಸ್ ಇನ್‌ಸ್ಪೆಕ್ಟರ್ ಗುಲಾಂ ಮೊಹಮೆದ್‌ಖಾಯವರು ಗುಡಿಬಂಡೆ 2ನೇ ಕ್ಲಾಸ್ ಡೆಪ್ಯೂಟಿ ಅಮಲ್‌ದಾರ್ ವ 3ನೇ ಕ್ಲಾಸ್ ಮೂಜಿಸ್ಟ್ರೇಟರಾಗಿ ಆ ಕ್ಟ್ ಮಾಡುವಂತೆ ವೊಕರರ್ ಮಾಡಲ್ಪಟ್ಟಿರುತ್ತಾರೆ.

ಹುಕ್ಕುಂ ಬವೋಜೀಬ್,
ಆರ್. ವಿಜಯಿಂದ್ರರಾವ್,
ಸೆಕ್ರಟೇರಿ.

ಮಿಲಿಟೆರಿ ಇಲಾಖೆ.

ತಾರೀಖು 2ನೇ ಜೂನ್ 1885.

ಸ್ ೧೮೮೪ನೇ ಇಸವಿ ಅಕ್ಟೋಬರ್ ತಾರೀಖು 1ರಲ್ಲು 1ನೇ ಪಟಾಲಂ 2ನೇ ಕ್ಲಾಸ್ ಸುಬೇದಾರ್ ದರ್ಜೆಗೆ ಹಂಗಾಮಿ ತರೀಕ್ ಬಡ್ತಿಮಾಡಲ್ಪಟ್ಟಿದ್ದ ಅದೇ ಪಟಾಲಮಿನ ಜಮಾದಾರ್ ಮುಜಾಜಿ ಯಂಬವರು, ಲೋಕಲ್ ಗವರ್ಣಮೆಂಟಿನ ಮಂಜೂರಾತಿನಿಸಿ, ಸದರೀ ದರ್ಜೆಯಲ್ಲಿ ಕಾಯಂ ಮಾಡಲ್ಪಟ್ಟಿರುತ್ತಾರೆ.

ಎ. ಸಿ. ಹೆ, ಕರ್ನಲ್,
ಮಿಲಿಟೇರಿ ಸೆಕ್ರಟೇರಿ.

ಪೊಲೀಸ್ ಇಲಾಖೆ.

ಇನ್ಸ್ಟಿಹಾರ್‌ನಾಮೆಗಳು.

ನಂ. 185—23. ತಾರೀಖು 1ನೇ ಜೂನ್ 1885.

ಹೆಗ್ಗಡ ದೇವನಕೋಟೆ ತಾಲ್ಲೂಕು ಹೊಸಹಳ್ಳಿ ವಾಸಸ್ಥನಾದ ಕೆಂಪಯ್ಯನೆಂಬುವನು ಅದೇ ತಾಲ್ಲೂಕು ಕೊಳಗಳ ಗ್ರಾಮದ ಶಾನುಭೋಗ ಕೇಷಯ್ಯ ಯಂಬವನನ್ನು ಖೂಮಾಡಿ ಫರಾರಿಯಾಗಿರುವದರಿಂದ ಸದರೀ ಕೆಂಪಯ್ಯನ ದಸ್ತಗಿರೀ ಬಗ್ಯೆ ಅಥವಾ ದಸ್ತಗಿರೀಗೆ ಸಾಧಕವಾದ ಖಾತಮಿಯನ್ನು ಕೊಡುವ ಬಗ್ಯೆ 50 ರೂಪಾಯಿಗಳ ಇನಾಮು ಕೊಡಲ್ಪಡುವದು.

ಸದರೀಯವನ ಚಹರೆಪಟ್ಟಿಯು ಇದರಡಿ ಕಂಡಂತೆ ಇರುತ್ತೆ:—

ಜೆಸರು—ಕೆಂಪಯ್ಯ, ತಂದೆಹೆಸರು—ಲಿಂಗೇಗೌಡ, ಜಾತಿ—ಶಿವಾಚಾರ ವಕ್ಕಲಿಗ, ವಯಸ್ಸು—ಸುಮಾರು 25 ವರುಷ, ವಾಸಸ್ಥಳ—ಹೆಗ್ಗಡದೇವನಕೋಟೆ ತಾಲ್ಲೂಕು ಹೊಸಹಳ್ಳಿಯಲ್ಲಿ ಅಳಿಯರಿಗೆ ವಾಸವಾಗಿದ್ದದ್ದು.

ಹೆಗ್ಗುರ್ತುಗಳು—ಳಳು ಉದ್ದನಾಗಿಧಾನೆ; ಕಪ್ಪುವರ್ಣ, ಸಣಿ ಮೀಸೆ; ದಾರದಲ್ಲಿ ಪೋಣಿಸಿದ ಒಂದು ಬೆಳ್ಳಿ ಕರಡಿಗೆ ಹಾಕಿಕೊಂಡಿಧಾನೆ. ತರಫಿನ ಯರಡು ಖಿಡಕುಗಳು, ಯಡಕಿವಿಯಲ್ಲಿ ಒಂದು ತಟ್ಟುಮುರು ಈ ಆಭರಣಂಗಳು ಮೈ ಮೇಲೆ ಇರುತ್ತೆ.

ಯಸ್. ವೆಂಕಟವರದಯ್ಯಂಗಾರ್,
ಅ॥ ಸೆಕ್ರಟೇರಿ.